

# ಐಸ್ ಕಾರು...!



'ಭಾರೀ ಪ್ರಮಾಣದ ಮಂಜುಗಡ್ಡೆಯಲ್ಲಿ ಕಾರು ಹುದುಗಿ ಹೋದರೆ ಏನಾದೀತು?' ಎಂದು ನಿಮ್ಮನ್ನು ಯಾರಾದರೂ ಪ್ರಶ್ನಿಸಿದರೆ, ಅಬ್ಬಾ! ಹೀಗೇನಾದರೂ ಆದರೆ ಚಾಲಕ ಹಾಗೂ ಕಾರಿನಲ್ಲಿ ಇದ್ದವರ ಕಥೆ ಮುಗೀತು ಎಂದೇ ಹೇಳುತ್ತೀರಿ ಅಲ್ಲವೇ?

ಆದರೆ ಹೀಗೆ ಹೇಳದ 'ಕೆನಡಿಯನ್ ಟೈರ್ ಸಂಸ್ಥೆ' ಮಂಜುಗಡ್ಡೆಯಿಂದಲೇ ಒಂದು ಕಾರನ್ನು ತಯಾರಿಸಿದೆ! ವಾಹನೋದ್ಯಮದಲ್ಲಿ ಈಗಾಗಲೇ ಹಲವಾರು ಪ್ರಯೋಗ ಮಾಡಿ ಯಶಸ್ವಿಯಾಗಿರುವ ಈ ಸಂಸ್ಥೆ ಈಗ ಇಂಥದ್ದೊಂದು ರೋಚಕ ಸಾಹಸಕ್ಕೆ ಕೈ ಹಾಕಿದೆ. 5000 ಕೆ.ಜಿ. ಐಸ್ ಬಳಸಿ ಈ ಕಾರು ತಯಾರಿಸಲಾಗಿದೆ. 2005 ಜಿಎಂಸಿ ಸಿಲ್ವರಡೊ ಫ್ರೇಮ್‌ನಲ್ಲಿ ಈ ಐಸ್ ಕಾರಿನ ಪ್ರಯೋಗ ಮಾಡಲಾಗಿದೆ.

ಮೈನಸ್ 40 ಡಿಗ್ರಿ ತಾಪಮಾನದಲ್ಲೂ ಈ ಕಾರು ಚಲಿಸುವ ಸಾಮರ್ಥ್ಯ ಹೊಂದಿದೆ. ಈ 5 ಸಾವಿರ ಕೆ.ಜಿ. ಐಸ್ ಕರಗುವುದರೊಳಗೆ ಗಂಟೆಗೆ 1.6 ಕಿ.ಮೀ. ರಿಂದ 20 ಕಿ.ಮೀ. ವೇಗ ಕಾಪಾಡಿಕೊಳ್ಳಲು ಕಾರು ಯಶಸ್ವಿಯಾಗಿದೆ. ಮಂಜುಗಡ್ಡೆಯಿಂದ ನಿರ್ಮಿತ ಈ ಕಾರು ಗಿನ್ನಿಸ್ ಪುಟ ಸೇರಲು ತುದಿಗಾಲಲ್ಲಿ ನಿಂತಿದೆ.

■ ಸವಿತಾ, ಬೆಂಗಳೂರು